ಉ) ಪರ್ಯಾಯ ಸುರಕ್ಷಿತ ಕುಡಿಯುವ ನೀರಿಲ್ಲದೇ ಅಶುದ್ಧ ನೀರಿನ ಸಮಸ್ಯೆಯಿರುವೆಡೆಯಲ್ಲೆಲ್ಲಾ ನೀರು ಶುದ್ಧೀಕರಣ ಘಟಕ ಅಳವಡಿಸುವುದು ಸರ್ಕಾರದ ಉದ್ದೇಶವಾಗಿದೆ.

ಬಸವ ವಸತಿ ಹಾಗೂ ಇಂದಿರಾ ಆವಾಸ್ ಯೋಜನೆ

2479(3395); ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್ (ನಿಪ್ಪಾಣಿ)

ಅ) 2012–13, 2013–14 ಹಾಗೂ 2014–15ನೇ ಸಾಲಿಗೆ ಚಿಕ್ಕೋಡಿ ತಾಲ್ಲೂಕಿನಲ್ಲಿ "ಬಸವ ವಸತಿ" "ಇಂದಿರಾ ಆವಾಸ್" ಯೋಜನೆಯಲ್ಲಿ ಮಂಜೂರಾಗಿರುವ ಮನೆಗಳು ಎಷ್ಟು; ನಿಗದಿಪಡಿಸಿರುವ ಗುರಿ ಎಷ್ಟು; ಯಾವ ಗ್ರಾಮದ ಯಾವ ಜಾತಿಯ ಯಾವ ಫಲಾನುಭವಿಗೆ ಹಂಚಿಕೆಯಾಗಿದೆ (ಪಂಚಾಯತಿವಾರು, ಜಾತಿವಾರು ವಿವರ ನೀಡುವುದು);

ಆ) ಮೇಲಿನ ಅವಧಿಯಲ್ಲಿ ಸದರಿ ಯೋಜನೆಗಳಲ್ಲಿ ಒಂದು ಗ್ರಾಮ ಪಂಚಾಯತಿಗೆ ಹಂಚಿಕೆಯಾದ ಮನೆಗಳನ್ನು, ಬೇರೊಂದು ಗ್ರಾಮ ಪಂಚಾಯತಿಗೆ ವರ್ಗಾವಣೆ ಮಾಡಲಾಗಿದೆಯೇ;
ಹಾಗಿದ್ದಲ್ಲಿ, ಯಾವ ಪಂಚಾಯಿತಿಯಿಂದ ಯಾವ ಪಂಚಾಯತಿಗೆ ಎಷ್ಟು ಮನೆ ವರ್ಗಾವಣೆಯಾಗಿದೆ;
ವರ್ಗಾವಣೆಗಿರುವ ಮಾನದಂಡಗಳೇನು; ಅದನ್ನು ಅನುಸರಿಸಿಯೇ ವರ್ಗಾವಣೆ ಮಾಡಲಾಗಿದೆಯೇ (ಗ್ರಾಮ ಪಂಚಾಯತಿವಾರು ಸಂಪೂರ್ಣ ವಿವರ ನೀಡುವುದು);

ಇ) 2013–14ನೇ ಸಾಲಿನ ಬಸವ–ವಸತಿ ಯೋಜನೆಯಲ್ಲಿ ಶೆಂಡೂರು ಗ್ರಾಮ ಪಂಚಾಯಿತಿಗೆ ಎಷ್ಟು ಮನೆಗಳು ಹಂಚಿಕೆಯಾಗಿದ್ದವು;
ನಂತರ ಅವು ಯಾವ ಪಂಚಾಯತಿಗೆ ವರ್ಗಾವಣೆಗೊಂಡಿವೆ;
ಯಾವ ಕಾರಣಕ್ಕೆ ವರ್ಗಾವಣೆಗೊಂಡಿವೆ; ಈ ರೀತಿ ಮಾಡಲು ಅವಕಾಶವಿದೆಯೇ; ಅದಕ್ಕೆ ಅನುಸರಿಸಿದ ನಿಯಮಗಳೇನು;

ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನೆ ಪೂರೈಸುವುದು; ನಿಯಮಗಳನ್ನು ಉಲ್ಲಂಘಿಸಿದ ಅಧಿಕಾರಿಗಳು/ಸಿಬ್ಬಂದಿಗಳು ಯಾರು; ಅವರ ಮೇಲೆ ಕೈಗೊಂಡಿರುವ ಅಥವಾ ಕೈಗೊಳ್ಳುವ ಕ್ರಮಗಳೇನು?

ಡಾ|| ಎಚ್.ಹೆಚ್. ಅಂಬಲಿಶ್ರೀ (ವಸತಿ ಸಚಿವರು)

ಅ). ಚಿಕ್ಕೋಡಿ ತಾಲ್ಲೂಕಿನಲ್ಲಿ 2012–13, 2013–14 ಹಾಗೂ 2014–15ನೇ ಸಾಲಿಗೆ ಬಸವ ವಸತಿ ಯೋಜನೆ ಹಾಗೂ ಇಂದಿರಾ ಆವಾಸ್ ಯೋಜನೆಗಳಡಿಯಲ್ಲಿ ನಿಗದಿ ಪಡಿಸಿದ ಗುರಿ ಮಂಜೂರಾಗಿರುವ ಫಲಾನುಭವಿಗಳ ಯೋಜನಾವಾರು ವಿವರ ಈ ಕೆಳಗಿನಂತಿದೆ;

ಯೋಜನೆ	ವರ್ಷ	ಗುರಿ	ಮಂಜೂರಾಗಿರುವ ಫಲಾನುಭವಿಗಳ ಸಂಖ್ಯೆ
ಬಸವ ವಸತಿ ಯೋಜನೆ	2013-14	1300	1240
ಬಸವ ವಸತಿ ಯೋಜನೆ ಹೆಚ್ಚುವರಿ (ಚಿಕ್ಕೋಡಿ ಸದಲಗಾ)	2013-14	ಗೀ500	493
ಇಂದಿರಾ ಆವಾಸ್ ಯೋಜನೆ	2012–13	2275	7852
ಇಂದಿರಾ ಆವಾಸ್ ಯೋಜನೆ	2013-14	1039	1008
ಇಂದಿರಾ ಆವಾಸ್ ಯೋಜನೆ	2014–15	929	806
ಒಟ್ಟು		6043	11399

ಗ್ರಾಮ ಪಂಚಾಯತಿವಾರು /ಗ್ರಾಮವಾರು /ವರ್ಗವಾರು /ಫಲಾನುಭವಿಗಳವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ. ಜಾತಿವಾರು ಗುರಿಯನ್ನು ಸರ್ಕಾರವು ನಿಗದಿಪಡಿಸುತ್ತಿರುವುದಿಲ್ಲ ಹಾಗೂ ಅನುಷ್ಠಾನಗೊಳಿಸುತ್ತಿರುವುದಿಲ್ಲ.

ಆ) ವರ್ಗಾವಣೆ ಮಾಡಲಾಗಿದೆ.

ಬವಸ ವಸತಿ ಯೊಜನೆ ಮತ್ತು ಇಂದಿರಾ ಆವಾಸ್ ಯೋಜನೆಗಳಡಿ ಅಧ್ಯರ್ಪಣೆ ಮಾಡಲಾದ ಮನೆಗಳ ಗುರಿಯನ್ನು ಅವಶ್ಯಕತೆಯಿರುವ ಪಂಚಾಯತಿಗಳಿಗೆ ವರ್ಗಾವಣೆ ಮಾಡಲಾದ ವಿವರಗಳನ್ನು ಗ್ರಾಮಪಂಚಾಯಿತಿವಾರು ತಯಾರಿಸಿ **ಅನುಬಂಧ– 2 & 3**ರಲ್ಲಿ ಒದಗಿಸಿದೆ.

ವಸತಿ ಯೋಜನೆಗಳಡಿ ಗ್ರಾಮ ಪಂಚಾಯತಿಗೆ ನಿಗದಿಪಡಿಸಲಾದ ಗುರಿಗೆ ಅನುಗುಣವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಸಾಮಾನ್ಯ ಹಾಗೂ ಅಲ್ಪಸಂಖ್ಯಾತ ವರ್ಗದ ಗುರಿಗೆ ಎದುರಾಗಿ ಅರ್ಹ ಫಲಾನುಭವಿಗಳು ಲಭ್ಯವಿಲ್ಲದಿದ್ದಲ್ಲಿ ಈ ಬಗ್ಗೆ ಗ್ರಾಮ ಸಭೆಯಲ್ಲಿ ಠರಾವು ಪಾಸು ಮಾಡಿ ಸದರಿ ಗುರಿಯನ್ನು ಅದೇ ತಾಲ್ಲೂಕಿನ ಬೇರೆ ಗ್ರಾಮ ಪಂಚಾಯಿತಿಗೆ ವರ್ಗಾಯಿಸಿಕೊಳ್ಳಲು ಅವಕಾಶವಿದೆ. ವರ್ಗಾವಣೆ ಮಾಡಲಾದ ವಿವರಗಳನ್ನು ಗ್ರಾಮಪಂಚಾಯಿತಿವಾರು ತಯಾರಿಸಿ **ಅನುಬಂಧ– 2 & 3**ರಲ್ಲಿ ಒದಗಿಸಿದೆ.

ಇ) 2013–14ನೇ ಸಾಲಿನ ಬಸವ–ವಸತಿ ಯೋಜನೆಯಲ್ಲಿ ಶೆಂಡೂರು ಗ್ರಾಮ ಪಂಚಾಯಿತಿಗೆ 20 ಮನೆಗಳು ಹಂಚಿಕೆಯಾಗಿದ್ದವು.

ಈ ಪಂಚಾಯಿತಿಯ ಮನೆಗಳನ್ನು ಜಾಗನೂರ ಪಂಚಾಯಿತಿಗೆ 5, ಖಿಡಕಲಾಟ ಪಂಚಾಯಿತಿಗೆ 5 ಹಾಗೂ ಮಾಂಜರಿ ಪಂಚಾಯತಿಗೆ 10 ಮನೆಗಳಂತೆ ವರ್ಗಾವಣೆ ಮಾಡಲಾಗಿದೆ.

ಪಂಚಾಯಿತಿಗೆ ನಿಗಧಿಯಾದ ಮನೆಗಳನ್ನು ಹಂಚಿಕೆ ಮಾಡಲು ವರ್ಗವಾರು ಅರ್ಹ ಫಲಾನುಭವಿಗಳು ಲಭ್ಯವಾಗದ ಕಾರಣ ಕಾರ್ಯನಿರ್ವಹಣಾಧಿಕಾರಿಗಳ ಕೋರಿಕೆ ಮೇರೆಗೆ ವರ್ಗಾವಣೆ ಮಾಡಲಾಗಗಿದ್ದು ವರ್ಗಾವಣೆಗೆ ಅನುಸರಿಸಬೇಕಾದ ನಿಯಮಗಳನ್ನು ಅನುಸರಿಸಲಾಗಿದೆ.

ಪ್ರಥಮ ಹಂತದಲ್ಲಿ ಮಂಜೂರಾಗಿದ್ದ ಮನೆಗಳಲ್ಲಿ ಕೆಲವು ಮನೆಗಳನ್ನು ಅರ್ಹ ಫಲಾನುಭವಿಗಳಿಗೆ ಹಂಚಿಕೆಯಾಗದೆ ಮನೆಗಳನ್ನು ಹಂಚಿಕೆ ಮಾಡಲು ಗ್ರಾಮ ಪಂಚಾಯಿತಿಗೆ ವಹಿಸಿಕೊಡಲು ಅವಕಾಶ ಕಲ್ಪಿಸಿ ದಿನಾಂಕ: 26-12-2013 ರಂದು ಹೊರಡಿಸಿರುವ ಸುತ್ತೋಲೆಯನ್ನು ಅನುಬಂಧ-4ರಲ್ಲಿ ಒದಗಿಸಲಾಗಿದ್ದು, ಈ ಸಂಬಂಧ ಬಂದಿರುವ ದೂರಿನ ಮೇರೆಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಪತ್ರ ಬರೆದು ಗುರಿ ಅಧ್ಯರ್ಪಣೆ ಮತ್ತು ವರ್ಗಾವಣೆ ಕೋರಿರುವ ವಿಷಯದ ಸಂಬಂಧ ಸುತ್ತೋಲೆಯಲ್ಲಿ ತಿಳಿಸಿರುವ ನಿಯಮಗಳನ್ನು ಪಾಲಿಸಿರುವ/ಪಾಲಿಸದಿರುವ ಬಗ್ಗೆ ಪರಿಶೀಲಿಸಿ ವರದಿ ನೀಡಲು ಕೋರಿದೆ, ವರದಿ ಬಂದ ತಕ್ಷಣ ಸುತ್ತೋಲೆಯಲ್ಲಿ ನೀಡಿದ್ದ ಸೂಚನೆಗಳ ಉಲ್ಲಂಘನೆಯಾಗಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಪ್ರವಾಸೋದ್ಯಮ ಅಭಿವೃದ್ಧಿ

2480(3334); ಶ್ರೀ ಕಾಶಪ್ಪನವರ ವಿಜಯಾನಂದ ಶಿವಶಂಕರಪ್ಪ (ಹುನಗುಂದ)

ಅ) ಮಹಾನ್ ಸಮಾಜ ಸುಧಾರಕ ಬಸವಣ್ಣನವರ ವಚನಗಳ ಸಾರವನ್ನು ಪ್ರಚಾರಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಆ) ಬಸವಣ್ಣನವರ ವಚನಗಳನ್ನು ಸಂಪೂರ್ಣವಾಗಿ ರಕ್ಷಿಸಿಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ;

ಇ) ಅಂತರಾಷ್ಟ್ರೀಯ ಬಸವ ವಚನ ಅಧ್ಯಯನ ಕೇಂದ್ರವನ್ನು ಸ್ಥಾಪಿಸಿ, ಪ್ರಚಾರಪಡಿಸಲು ಸರ್ಕಾರ ಯಾವ ಯೋಜನೆ ಹಮ್ಮಿಕೊಂಡಿದೆ?